ಲುಂಗಿಯಿಂದ ಮರಕ್ಕೆ ನೇತು ಹಾಕಿಕೊಂಡು ಅವನು ಜೀವ ಬಿಟ್ಟಿದ್ದ. ಜೈಲಿಗೆ ಹೋಗಿ ಬಂದರೂ ಕಂಗೆಡದವನು ಹೆಂಡತಿಯ ನಿರಾಕರಣೆಯಿಂದ ಕುಸಿದು ಹೋಗಿದ್ದ. ತನ್ನ ವರ್ತನೆ ಸರಿಯೋ, ತಪ್ಪೋ? ತಾನೇ ಕೈಯಾರೆ ಅವನ ಜೀವ ತೆಗೆದ ಪಾಪ ಸೆರಗಿಗೆ ಕಟ್ಟಿಕೊಂಡೆನಾ? ಅವನು ತನ್ನಲ್ಲಿ ಅಷ್ಟು ಜೀವ ಇಟ್ಟುಕೊಂಡಿದ್ದನಾ? ತನಗೋಸ್ಕರವೇ ಮಾಡಬಾರದ ಕೆಲಸಕ್ಕೆ ಕೈ ಹಾಕಿದನಾ? ಮನಸ್ಸು ವಿಲಿವಿಲಿಗುಟ್ಟಿತ್ತು. ಅತ್ತಿಗೆಯ ಉರಿಗಣ್ಣಿಗೆ ಸುಡುವ ಶಕ್ತಿ ಇದ್ದಿದ್ದರೆ ಅವತ್ತೇ ಚಂಪಾ ಹಿಡಿ ಬೂದಿಯಾಗಿರುತ್ತಿದ್ದಳು. ಸರಿ ತಪ್ಪುಗಳ ಹೊಯ್ದಾಟ ಸತತವಾಗಿ ಕಾಡುತ್ತಾ ಚಂಪನನ್ನು ಹೈರಾಣಾಗಿಸಿತ್ತು. ಯಾವತ್ತಿನಿಂದಲೋ ಹೊಟ್ಟೆಯೊಳಗೆ ಮಡುಗಟ್ಟಿದ್ದ ಆಕ್ರೋಶ ಅವನ ಎದುರಲ್ಲಿ ಆಸ್ಫೋಟಗೊಂಡಿದ್ದರೆ ಅದಕ್ಕೆ ಕಾರಣ ಮನುಷ್ಯಸಹಜ ಸ್ವಭಾವ, ಅದರಲ್ಲಿ ತನ್ನ ತಪ್ಪೇನಿದೆ ಎಂದು ಸಮಾಧಾನ ಕಂಡುಕೊಳ್ಳಲೆತ್ನಿಸುತ್ತಿದ್ದಳು ಚಂಪಾ. ಆದರೂ ಕೆಲವೊಮ್ಮೆ ಪಾಪಪ್ರಜ್ಞೆ ಮನಸ್ಸಲ್ಲಿ ಭುಗಿಲೇಳುತ್ತಿತ್ತು. ಹಾಗಿದ್ದರೆ ತಪ್ಪನ್ನು ತಪ್ಪು ಅನ್ನಬಾರದಾ? ತಪ್ಪು ಮಾಡಿದವರನ್ನು ಒಪ್ಪಿಟ್ಟುಕೊಂಡು ಎದೆಗಪ್ಪಿಕೊಳ್ಳಬೇಕಾ? 'ಮತ್ತೊಂದು ತಪ್ಪು ಮಾಡಿದರೂ ನಡೆಯುತ್ತದೆ' ಎನ್ನುವ ಉಡಾಫೆ ಅವರಿಗೆ ಬರಲಿಕ್ಕಿಲ್ಲವಾ? ಅಷ್ಟೆಲ್ಲಾ ಮರ್ಯಾದಸ್ಥರು, ಸೂಕ್ಷ್ಮಸ್ವಭಾವದವರು ಆಗಿದ್ದರೆ ತಪ್ಪು ಮಾಡಿದ್ದೇಕೆ? ಮಹಾ ಪತಿವ್ರತೆಯಂತೆ ಬೆನ್ನು ಬಿದ್ದು ಹೋಗಿದ್ದರೆ ಜನ ತನ್ನನ್ನು

